ಕೇವಲ ಕುತೂಹಲ ತಣಿಸುವ ಪ್ರಶ್ನೆಗಳಾಗಿದ್ದವು. ನನ್ನ ಆಗಿನ ತುರ್ತು ನಿಕಿಟಾ ಎನ್ನುವ ವ್ಯಕ್ತಿಗೆ ಸರಿಯಾದ ಚಿಕಿತ್ಸೆ ಕೊಡುವುದು ಎನ್ನುವುದು ನಾನು ಈ ಕಥೆಯನ್ನು ಮತ್ತೆ ಕೇಳುವ ನನ್ನ ವೈಯಕ್ತಿಕ ಕಿರಿಕಿರಿಯಿಂದ ತಪ್ಪಿಸಿಕೊಳ್ಳಲು ಎಂದನಿಸದೇ ಇರಲಿಲ್ಲ.

'ಸೂರಿ, ನಿಕಿಟಾಗೆ ಯಾವ ಸರ್ಜರಿಯೂ ಆಗದೇ ಗಂಡಸಿನ ಹೊರ ಅಂಗಾಂಗಗಳು ಬರಲಾರವು. ಎಂಥ ಸರ್ಜರಿ ಆದರೂ ದೇವರು ಕೊಡುವ ಅಂಗವನ್ನು ಯಾವ ಸರ್ಜನೂ ತನ್ನ ಕೈಚಳಕದಿಂದ ಮತ್ತೆ ಮರುಸೃಷ್ಟಿಸಲಾರ. ಇದು ನನ್ನ ಅನುಭವ ಕೂಡ. ನೀನು ಹೇಳುವುದನ್ನು ಕೇಳಿದರೆ ನನಗನ್ನಿಸುತ್ತೆ ನಿಕಿಟಾ ಗಂಡು. ಹೆಣ್ಣಾಗಬಯಸುವ ಗಂಡಸು. ಕಾರಣಾಂತರಗಳಿಂದ ಆಕೆಗೆ ಬೇಕಾದ ವೈದ್ಯಕೀಯ ಸಹಾಯ ಸಿಕ್ಕಿಲ್ಲ. ಹಾಗಾಗಿ ಆ ವ್ಯಕ್ತಿ ತಾನು ಹೆಣ್ಣು ಎಂದು ಬಲು ಖಚಿತವಾಗಿ ನಂಬಿದ್ದಾಗಿದೆ. ಈ ನಂಬಿಕೆ ಎಷ್ಟು ಹಾಸುಹೊಕ್ಕಿದೆ ಮತ್ತು ಆ ನಂಬಿಕೆಯ ಪೂರೈಕೆಗೆ ಎಷ್ಟು ಹೊಡೆದಾಡುತ್ತಾ ಇದೆ ಆ ವ್ಯಕ್ತಿ ಎಂದರೆ ಆಕೆಯ ನಿಜವಾದ ಐಡೆಂಟಿಟಿ ಏನೆಂಬುದನ್ನು ಮರೆತಿದ್ದಾಗಿದೆ. ನಿಕಿಟಾ ತನಗೆ ಹೆಣ್ಣು ಅಂಗಾಂಗಗಳಿದ್ದಾವೆ ಎಂದು ನಂಬಿಯಾಗಿದೆ. ಇಲ್ಲದಿದ್ದರೆ ಯಾವ ಗಂಡು ಸ್ಟಿರಪ್ಪಿನ ಮೇಲೆ ಮಲಗಿ ಕಾಲಗಲಿಸುತ್ತಾನೆ. ನಿಕಿಟಾ ಈಸ್ ಅ ಪರ್ಫೆಕ್ಟ್ ಡ್ಯೂಡ್ ಲೈಕ್ ಯು, ಅಂಡ್ ಐ ವಾಸ್ ಒನ್ಸ್. ನಾನು ಆತನಿಗಿಂತ ಅದೃಷ್ಟಶಾಲಿ, ಅಷ್ಟೇ. ನನ್ನ ಮನಸ್ಸೂ ದೇಹವೂ ಸಮಾನಾಂತರವಾಗಿ ಬದಲಾಗಲು ನನಗೆ ಅವಕಾಶ, ಹಣ ಎಲ್ಲ ಇತ್ತು. ನಿಕಿಟಾ ಎನ್ನುವ ವ್ಯಕ್ತಿಗಿಲ್ಲ. ಯು ನೌ ನೋ ವೈ ಅ ಲಾಟ್ ಆಫ್ ಟ್ರಾನ್ಸ್ ಪರ್ಸನ್ಸ್ ಡೆವಲಪ್ ಸೈಕಿಯಾಟ್ರಿಕ್ ಇಶ್ಯೂಸ್' ಎಂದ.

'ನಾನೇನು ಮಾಡಲಿ, ಈಗ?'

'ನಮ್ಮಾಸ್ಪತ್ರೆಗೆ ಕಳಿಸು. ನಾನು ಸಂಭಾಳಿಸುತ್ತೇನೆ. ಎಂಆರ್‌ಐ ಮಾಡಿಯೇ ಮಾಡುತ್ತೇನೆ ಎಂದು ಹೇಳಬೇಡ. ಪರಿಣತ ಅಭಿಪ್ರಾಯಕ್ಕೆ ಎಂದು ಹೇಳು. ನಾನು ಮುಂದಿನದನ್ನು ನಿಭಾಯಿಸುತ್ತೇನೆ. ನನಗಿಂತ ಎಕ್ಸ್‌ಪರ್ಟ್ ನಿನಗೆ ಯಾರು ಸಿಗುತ್ತಾರೆ?'

'ಥ್ಯಾಂಕ್ಸ್ ಮಾರಿಸ್' ಎಂದೆ.

'ಡಾ. ಮೆಲಿಸ್ಸಾ ರಫೇಲ್' ಎಂದು ತಿದ್ದಿದಳು. 'ಬೈ ದ ವೇ, ಐ ಆಮ್ ಅಫಿಶಿಯಲಿ ಅಫೆಂಡೆಡ್. ನಾವು ಕೆಲಸದಲ್ಲಿರಬೇಕಾದರೆ ವೃತ್ತಿಪರರಾಗಿರಬೇಕು. ಆದರೆ, ನೀನು ನಾನು ಡಾ. ರಫೇಲ್ ಆದೆ ಎಂದು ಗೊತ್ತಾದ ಮೇಲೂ ಯಾವ ಬೆರಗಿಲ್ಲದೆ ಬರೇ ನಿನ್ನ ಪೇಶೆಂಟಿನ ಬಗ್ಗೆ ಮಾತ್ರ ಮಾತಾಡ್ತೀಯಲ್ಲ. ಒಮ್ಮೆಯಾದರೂ ನನಗೆ ಏನೇನಾಯಿತು ಎಂದು ಕೇಳಿದೆಯಾ. ಫರ್ ಫಕಿಂಗ್ ಕರ್ಟಿಸಿ ಸೇಕ್' ಎಂದಳು. ನಾನು ಏನೂ ಮಾತಾಡಲಿಲ್ಲ.

'ನಾನು ನಿಕಿಟಾಳನ್ನು ಇನ್ನರ್ಧ ಗಂಟೆಯೊಳಗೆ ನಮ್ಮ ಎಮರ್ಜೆನ್ಸಿ ಡಿಪಾರ್ಟ್‌ಮೆಂಟಿನಲ್ಲಿ ನಿರೀಕ್ಷಿಸುತ್ತೇನೆ' ಎಂದು ಹೇಳಿ ಡಾ. ರಫೇಲ್ ಫೋನಿಟ್ಟಳು.

ಎಲ್ಲರ ಲೈಂಗಿಕ ಒಲವು, ಲಿಂಗದ ಆಯ್ಕೆ ಅವರವರ ಇಷ್ಟ. ನಾನು ಮಾರಿಸ್ ಮೆಲಿಸ್ಸಾ ಆಗಿದ್ದ ಕ್ರಿಯೆಯನ್ನು ಆತ ಅಥವಾ ಆಕೆಯಷ್ಟೇ ಪ್ಯಾಶನ್ನಿಂದ ಫಾಲೋ ಮಾಡಬೇಕು ಎನ್ನುವ ನಿಯಮವೇನಿದೆ. ನಾನೂ ಒಬ್ಬ ವ್ಯಕ್ತಿ ತಾನೇ? ನನ್ನ ಪೂರ್ವಗ್ರಹಗಳನ್ನು ನನ್ನ ನಂಬಿಕೆಗಳನ್ನು ನಾನು ಯಾರಮೇಲೂ ಒತ್ತಾಯಿಸುತ್ತಿಲ್ಲವಲ್ಲ. ಅಂದು ರೆಸ್ಟ್‌ರೂಮಿನಲ್ಲಿ ಮಾರಿಸ್‌ನ ಲಿಪ್‌ಸ್ಟಿಕ್ ನನ್ನ ಕೆನ್ನೆಗೆ ಹತ್ತಿದಾಗ ನನಗೆ ಇಷ್ಟವಾಗಲಿಲ್ಲ ಎಂದು ಮಾರಿಸ್ ಒಮ್ಮೆಯಾದರೂ ನಂಬಿದ್ದನಾ? 'ಯು ಲುಕ್ ಕ್ಯೂಟ್' ಎಂದಿದ್ದ. ಆತ ಹೆಣ್ಣಾಗುವ ಭರದಲ್ಲಿ ನಾನು ಇನ್ನೊಬ್ಬ ಗಂಡು ಎನ್ನುವುದನ್ನು ಆತ ಮರೆತಿದ್ದನಾ? ಅಥವಾ ನಾವು ಪೂರ್ಣಾರ್ತಿಪೂರ್ಣರು